ಶ್ರೀ ಬಿ. ಹುಚ್ಚೇಗೌಡ.—ಲೈನನ್ನು ಅರಳಗುಪ್ಪೆ ಮಾರ್ಗವಾಗಿ ತರುತ್ತೀರೋ ಅಥವಾ ತಿಪಟೂರು ಮಾರ್ಗವಾಗಿ ತರುತ್ತೀರೋ?

ಡಾ॥ ಆರ್. ನಾಗನಗೌಡ.—ಅದನ್ನು map ಇಟ್ಟುಕೊಂಡು ಹೇಳಬೇಕಾಗುತ್ತದೆ.

Irrigation Pumps (Supply to Hoskote and Anekal Taluks).

Q.—486. **Sri H. T. PUTTAPPA** (Hoskote-Anekal—Scheduled Castes).—

Will the Government be pleased to state :—

(*a*) the number of irrigation pumps supplied to each village in Hoskote and Anekal taluks ;

(*b*) the number of applications received for irrigation pumps sets from these Taluks ;

(*c*) the reason for not providing the irrigation pumps to certain villages in spite of their requests ?

A.—**Dr. R. NAGAN GOWDA** (Minister for Agriculture).

(*a*)

	No. of I. P. Sets serviced (during the year 1953-54 and 1954-55 up-to-date)
Hoskote Taluk.—	
1. Hoskote ...	2
2. Seeghalli ...	1
3. Gondur ...	1
4. Kathigollahalli ...	3
5. Mandur ...	1
6. Sulebele ...	4
7. Sringaripura ...	1
8. Balepura ...	2
9. Upparahalli ...	2
10. Allappanahalli ...	2
11. Thimmasandra ...	1
12. Giddappanahalli ...	1
13. Ramagovindapura ...	2
14. Dasabahalli ...	1
15. Sonnahallipura ...	4
16. Dodda Kurubarahalli ...	1
17. Sonnadevanahalli ...	1
18. Bidarahalli ...	2
Total ...	32
Anekal Taluk.—	
1. Anekal ...	3
2. Billapura ...	1
3. Hebbagodi ...	1
4. Hasagadde ...	1
5. Sarjapura ...	4
6. Kammasandra ...	2
7. Singasandra ...	1
8. Chandapura ...	2
9. Banahalli ...	2
10. Itchangur ...	4
11. Attibele ...	1
12. Kambipura ...	1
13. Neralur ...	2
Total ...	25

(*b*)

	No. of applications received during 1953-54 and 1954-55.
Taluk.—	
Hoskote	32
Anekal	14

(*c*) Partly that the prescribed requirements are not fulfilled and partly that the transformers and lines supplying the area are overloaded.

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ವರುಷದಲ್ಲಿ ಎಷ್ಟು ಅರ್ಜಿದಾರರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಹೊಸಕೋಟೆ, ಆನೇಕಲ್ ತಾಲ್ಲೂಕ್‌ಗಳಲ್ಲಿ ಸಾಧ್ಯವಾಗಿದೆ?

ಡಾ॥ ಆರ್. ನಾಗನಗೌಡ.—ಹೊಸಕೋಟೆ, ಆನೇಕಲ್ ತಾಲ್ಲೂಕುಗಳಿಗೆ ಮೇಲೆ ಹೇಳಿದಂತೆ 32 ಮತ್ತು 25 ಗ್ರಾಮಗಳಿಗೆ ನೀರಾವರಿ ಪಂಪುಗಳನ್ನು ಒದಗಿಸಿದ್ದೇವೆ. ಆ ತಾಲ್ಲೂಕುಗಳಿಂದ 32 ಮತ್ತು 14 ಅರ್ಜಿಗಳು ಇನ್ನೂ ನಿಂತು ಹೋಗಿವೆ. ಈಗ frequency conversion ಮಾಡುವುದು ಮುಗಿಯುತ್ತಾ ಬಂದಿದೆ. ಈಗಾಗಲೆ ಕೆಲವು ಭಾಗ ಕೆಲಸ ಮಾಡುತ್ತಿದೆ. ಹೊಸಕೋಟೆಗೆ ಒಂದು sub-unit ಏರ್ಪಾಡು ಮಾಡಿದ್ದೇವೆ. ಆ ತರುವಾಯ ಆನೇಕಲ್ಲಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಸ್. ಪರಮೇಶ್ವರಪ್ಪ.—ಶಿರಾಗುಪ್ಪೆಗೆ ವಿದ್ಯುಚ್ಛಕ್ತಿ ಕೊಡುತ್ತೀರೋ?

Mr. SPEAKER.—That does not arise.

ಶ್ರೀ ಎ. ವಿ. ನರಸಿಂಹರೆಡ್ಡಿ.—53-54, ಮತ್ತು 54-55ನೇ ಸಾಲಿನಲ್ಲಿ ಹೊಸಕೋಟೆ ತಾಲ್ಲೂಕಿನಲ್ಲಿ 32 pump sets ಗಳನ್ನು ಕೊಟ್ಟಿದ್ದೀರಿ. ಆದರೆ ಇಲ್ಲಿ ಪ್ರಶ್ನೆ ಇರುವುದು ಇಲ್ಲಿಯತನಕ ಎಷ್ಟು pump sets ಗಳನ್ನು ಕೊಟ್ಟಿದ್ದೀರಿ ಎಂದು.

Dr. R. NAGAN GOWDA.—During the years 1953-54 and 1954-55 up-to-date figures are given.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಶ್ನೆ ಕೇಳಿರುವುದು. ಇಲ್ಲಿಯತನಕ ಎಷ್ಟು pump setsಗಳನ್ನು ಕೊಟ್ಟಿದ್ದೀರಿ ಎಂದು. ಅದನ್ನು ಹೇಳುವುದಕ್ಕೆ ಸಾಧ್ಯವಿದೆಯೇ?

Dr. R. NAGAN GOWDA.—The question was about the number of irrigation pumps supplied to each village in Hoskote and Anekal taluks. Period is not mentioned. ಆದಕಾರಣ ನಾವು ಈ ವರ್ಷದ ಮತ್ತು ಹಿಂದಿನ ವರುಷದ ಸಂಖ್ಯೆಯನ್ನು ಕೊಟ್ಟಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಶ್ನೆ ಇರುವುದು ಇಲ್ಲಿಯತನಕ ಈ ತಾಲ್ಲೂಕ್‌ಗಳಲ್ಲಿ ಎಷ್ಟು pump sets ಗಳನ್ನು ಕೊಟ್ಟಿದ್ದೀರಿ ಎಂದು. ನೀವು ಎರಡು ವರ್ಷಗಳಿಗೆ ಉತ್ತರ ಮಾತ್ರ ಕೊಟ್ಟಿದ್ದೀರಿ. ಪ್ರಾರಂಭದಿಂದ ಎಷ್ಟು ಕೊಟ್ಟಿದ್ದೀರಿ ಎಂದು ಹೇಳಲು ಸಾಧ್ಯವೇ?

Dr. R. NAGAN GOWDA.—Notice.

ಶ್ರೀ ಎ. ವಿ. ನರಸಿಂಹರೆಡ್ಡಿ.—Pump set ಗಳನ್ನು 1954-55ನೇ ಸಾಲಿನಲ್ಲಿ ಎಷ್ಟು ಕೊಟ್ಟಿದ್ದೀರಿ? ಮತ್ತು 1953-54ನೇ ಸಾಲಿನಲ್ಲಿ ಎಷ್ಟು ಕೊಟ್ಟಿದ್ದೀರಿ?

Dr. R. NAGAN GOWDA.—I am unable to give that, Sir. It is for both the years that the figures are given.

ಶ್ರೀ ಎ.ವಿ.ನರಸಿಂಹರೆಡ್ಡಿ.—ಅರ್ಜಿಗಳು pending ಇವೆ ಎಂದು ಹೇಳಿದ್ದೀರಿ? ಅವು ಎರಡು ವರ್ಷಗಳಿಂದ ಬಂದಿರುವುದೋ ಅಥವಾ ಇನ್ನೂ ಬೇರೆ ಯಾವವಾದರೂ ಅದರಲ್ಲಿ ಸೇರಿವೆಯೇ?

ಡಾ॥ ಆರ್. ನಾಗನಗೌಡ.—ಅವು ಈಗ ನಮ್ಮ ಹತ್ತಿರ pending ಇರುವುವು. ಅರ್ಜಿಗಳು ಯಾವಾಗ ಬಂದುವು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಾವು ಇನ್ನೂ ಕರೆಂಟ್ ಕೊಡಬೇಕಾದರೆ ಇನ್ನೂ ಉಳಿದಿರುವುದು 32 ಮತ್ತು 14 ಅರ್ಜಿಗಳು ಮಾತ್ರವೇ ಅಲ್ಲವೇ?

ಅಧ್ಯಕ್ಷರು.—ಅದನ್ನು ಹೇಳಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—1953-54 ಮತ್ತು 1954-55 ಸಾಲುಗಳಿಗೆ ಮಾತ್ರ ಹೇಳಿದ್ದಾರೆ. ಹಿಂದಿನ ಅರ್ಜಿಗಳು ಇದ್ದೇ ಇರಬೇಕು. ಅವೆಲ್ಲಾ ಒಟ್ಟು ಎಷ್ಟು?

ಅಧ್ಯಕ್ಷರು.—'Notice' ಎಂದು ಹೇಳಿದರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ದಯವಿಟ್ಟು ವಿಚಾರಣೆ ಮಾಡಿ commercial crops ಬೆಳೆಯತಕ್ಕ ಈ ಎರಡು ತಾಲ್ಲೂಕ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಮೊದಲೇ ಹೇಳಿದ ಹಾಗೆ ಹೊಸಕೋಟೆಗೆ sub-unit ಏರ್ಪಾಡು ಮಾಡಿದ್ದೇವೆ. ಮತ್ತು frequency conversion ಬಹಳ ಬೇಗ ಮಾಡಿ ಆನೇಕಲ್ಲಿಗೆ ಹೊಸದಾಗಿ ವಿದ್ಯುಚ್ಛಕ್ತಿಯನ್ನು ಕೊಡುವ ಪ್ರಯತ್ನದಲ್ಲಿ ಇದ್ದೇವೆ. ಎಷ್ಟು ಬೇಗನೆ ಬೇಕೋ ಅಷ್ಟು ಬೇಗನೆ ಕೊಡಲು ನಾವು ಪ್ರಯತ್ನಮಾಡುತ್ತೇವೆ.

ಶ್ರೀ ಜಿ. ಪಾಪಣ್ಣ.—Frequency Conversion ಆದರೂ ಕೂಡ ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಸ್ವಲ್ಪಮಟ್ಟಿಗೆ ಹೆಚ್ಚಾಗಿ ಕೊಡುವುದಕ್ಕೆ ಆಗುತ್ತದೆ. ಈಗ ಇರುವುದಕ್ಕಿಂತಲೂ ಹೆಚ್ಚಾಗಿ ಕೊಡುತ್ತೇವೆ.

ಶ್ರೀ ಜಿ. ಪಾಪಣ್ಣ.—50 ಸೈಕಲ್ ಲೈನ್ overload ಆಗಿದೆ. Frequency Conversion ಮಾಡಿದರೂ ಈಗಿರುವುದಕ್ಕಿಂತ ಹೆಚ್ಚಾಗಿ ಕೊಡುವುದಕ್ಕೆ ಆಗುವುದಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಈಗ ಕೊಟ್ಟಿರುವುದಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಕೊಡುವುದಕ್ಕೆ technically ಅನುಕೂಲವಿದೆ ಎಂದು ಹೇಳಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್.—Pump setಗಳನ್ನು ಒದಗಿಸಬೇಕಾದರೆ ಎಷ್ಟು ದಿನಗಳಾಗುತ್ತವೆ?

ಡಾ॥ ಆರ್. ನಾಗನಗೌಡ.—ಅಲ್ಲಿ ಇರುವ ಸಂದರ್ಭಗಳ ಮೇಲೆ ಹೋಗುತ್ತದೆ. ಆದರೆ ನಮ್ಮ ಸರಕಾರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡಲು ಎಷ್ಟು ಕಾಲ ತೆಗೆದುಕೊಳ್ಳುತ್ತಾರೆಂಬುದನ್ನು ಇನ್ನೊಂದು ಸರ್ಕಾರ ಮೊದಲೆ ಹೋಲಿಸಿ ನೋಡಿದರೆ ನಾವು ಬೇರೆಯವರಿಗಿಂತ ಸ್ವಲ್ಪ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದೇವೆ ಎಂದು ಹೇಳಬಹುದು.

ಶ್ರೀ ಬಿ. ಟಿ. ಕೆಂಪರಾಜ್.—Pending ಇರುವ ಕೇಸುಗಳಲ್ಲಿ ವಿದ್ಯುಚ್ಛಕ್ತಿ ಕೊಡುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ತಕರಾರು ಹಾಕಿಕೊಂಡು ಪಾರ್ಟಿಗಳಿಗೆ ತೊಂದರೆ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ವಿನಾಕಾರಣ ತೊಂದರೆ ಮಾಡುತ್ತಾ ಇದ್ದರೆ, ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಟಿ. ಕೆಂಪರಾಜ್.—Deposit ಕೊಟ್ಟಿದ್ದರೂ pumps ಕೊಡದೆ ಪೀಟರುಗಳು ಹಾಕದೆ charges ಹೆಚ್ಚಾಗಿ ವಸೂಲು ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

Mr. SPEAKER.—It does not arise out of this question.

Power Supply to certain Villages of Chiknaikanahalli Taluk.

Q.—564. Sri C. H. LINGADEVARU (Chiknaikanahalli).—

Will the Government be pleased to state:—

(*a*) whether power supply to Bellara Gold Mines is not saved due to stoppage of work there;

(*b*) whether the people of Thimmanahalli, Chiknaikanahalli Taluk, have not requested for the supply of power to irrigation pump sets and also deposited the necessary amount;

(*c*) whether estimates are prepared for supplying electricity from Bellara to (i) Thimmanahally and Kanthikere and (ii) Huliyar and Kenkere villages;

(*d*) whether they would take action to supply the power immediately?